ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

23 ನವೆಂಬರ್ 2018

ಇವರಿಗೆ,

**ಡಾ. ಜಿ. ಪರಮೇಶ್ವರ**
ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಬೆಂಗಳೂರು ಅಭಿವೃದ್ಧಿ ಸಚಿವರು
ವಿಧಾನಸೌಧ, ಬೆಂಗಳೂರು

ವಿಷಯ: ಹುತಾತ್ಮ ಮೇಜರ್ ಅಕ್ಷಯ್ ಗಿರೀಶ್ ಕುಮಾರ್ ರವರ ಗೌರವಾರ್ಥ ರಸ್ತೆ ನಾಮಕರಣ ಮಾಡುವ ಕುರಿತು.

ಯಲಹಂಕ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ೧೩ನೇ ಮುಖ್ಯ ರಸ್ತೆಯಿಂದ ಮೇಜರ್ ಉನ್ನಿಕೃಷ್ಣನ್ ರಸ್ತೆವರೆಗಿನ ೧೬ನೇ ಅಡ್ಡರಸ್ತೆಗೆ "ಅಕ್ಷಯ್ ಗಿರೀಶ್ ಕುಮಾರ್ ರಸ್ತೆ" ಎಂದು ನಾಮಕಾರಣ ಮಾಡುವುದೆಂದು ದಿನಾಂಕ ೩೦-೦೮-೨೦೧೭ ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನಿಸಲಾಗಿತ್ತು.

ತಮಗೆ ತಿಳಿದಿರುವಂತೆ, ಮೇಜರ್ ಅಕ್ಷಯ್ ಗಿರೀಶ್ ಕುಮಾರ್ ಅವರು ಬೆಂಗಳೂರಿನ ಸ್ಥಳೀಯರಾಗಿದ್ದರು ಮತ್ತು ೨೯ ನವೆಂಬರ್ ೨೦೧೬ರಂದು ಜಮ್ಮು ಸಮೀಪದಲ್ಲಿರುವ ನಗ್ರೋಟ ಸೇನಾ ಕ್ಯಾಂಪ್ ಮೇಲೆ ಭಯೋತ್ಪಾದಕರು ದಾಳಿ ನಡೆದಾಗ ಪ್ರತಿ ಹೋರಾಟದಲ್ಲಿ ಹುತಾತ್ಮರಾಗಿದ್ದ ಏಳು ಭಾರತೀಯ ಯೋಧರಲ್ಲಿ ಒಬ್ಬರಾಗಿದ್ದರು.

ರಸ್ತೆ ನಾಮಕರಣ ಮಾಡುವ ಕುರಿತು ೧೯ ಫೆಬ್ರವರಿ ೨೦೧೮ರಂದು ಬಿಬಿಎಂಪಿ ನಿರ್ಣಯ ಅನುಮೋದಿಸಿತ್ತು (ಪ್ರತಿ ಲಗತ್ತಿಸಲಾಗಿದೆ). ಆದರೂ ಈವರೆಗೆ ಹುತಾತ್ಮ ಯೋಧನ ಗೌರವಾರ್ಥ ಆ ರಸ್ತೆಯನ್ನು ಅವರ ಹೆಸರಿನಲ್ಲಿ ನಾಮಕರಣ ಮಾಡಲು ಯಾವುದೇ ಕ್ರಮ ಕೈಗೊಂಡಿಲ್ಲದಿರುವುದು ವಿಷಾದಕರ.

ಆದ್ದರಿಂದ, ೨೯ ನವೆಂಬರ್ ೨೦೧೮ರಂದು ಅವರು ಹುತಾತ್ಮರಾಗಿ ಎರಡು ವರ್ಷವಾಗುತ್ತಿರುವ ಸಂದರ್ಭದಲ್ಲಿ ಅತೀ ಶೀಘ್ರವಾಗಿ ಈ ಪ್ರಕ್ರಿಯೆಯನ್ನು ಚುರುಕುಗೊಳಿಸಿ ಅಗತ್ಯ ವ್ಯವಸ್ಥೆಗಳನ್ನು ಮಾಡಬೇಕೆಂದು ಒತ್ತಾಯಿಸುತ್ತೇನೆ.

ಸದರಿ ಬಿಬಿಎಂಪಿ ನಿರ್ಣಯದಲ್ಲಿ "ಅಕ್ಷಯ್ ಗಿರೀಶ್ ಕುಮಾರ್ ರಸ್ತೆ" ಎಂದು ನಾಮಕರಣ ಮಾಡಬೇಕಾಗಿ ತೀರ್ಮಾನಿಸಿರುವ ಬದಲಾಗಿ "ಮೇಜರ್ ಅಕ್ಷಯ್ ಗಿರೀಶ್ ಕುಮಾರ್ ರಸ್ತೆ" ಎಂದು ನಾಮಕರಣ ಮಾಡಬೇಕಾಗಿ ಸಲಹೆ ನೀಡುತ್ತಿದ್ದೇನೆ.

ತಮ್ಮ ಶೀಘ್ರ ಕ್ರಮಕ್ಕಾಗಿ ಎದುರು ನೋಡುತ್ತಿದ್ದೇನೆ.

ಧನ್ಯವಾದಗಳೊಂದಿಗೆ,

ರಾಜೀವ್ ಚಂದ್ರಶೇಖರ್

11ನೇ ಮಹಡಿ, ದೊಡ್ಡ ಗೋಪುರ, ಸರ್ ಎಂ. ವಿಶ್ವೇಶ್ವರಯ್ಯ ಕೇಂದ್ರ, ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು - 560 001
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್ : 91-80-22863680
ಅಂತರ್ಜಾಲ ವಿಳಾಸ : rajeev.c@nic.in
www.rajeev.in / ham:VU2RCL

## ದಿನಾಂಕ:19-02-2018ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

### ವಿಷಯ ಸಂಖ್ಯೆ:20(374)2017-18

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಯಲಹಂಕ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ 13 ನೇ ಮುಖ್ಯ ರಸ್ತೆಯಿಂದ ಮೇಜರ್ ಉನ್ನಿಕೃಷ್ಣನ್ ರಸ್ತೆವರೆಗಿನ 16 ನೇ ಅಡ್ಡರಸ್ತೆಗೆ "ಅಕ್ಷಯ್ ಗಿರೀಶ್ ಕುಮಾರ್ ರಸ್ತೆ" ನಾಮಕರಣ ಮಾಡುವ ಬಗ್ಗೆ ದಿನಾಂಕ:30-08-2017ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:13(183)/2017-18ರಲ್ಲಿ "ಅಕ್ಷಯ್ ಗಿರೀಶ್ ಕುಮಾರ್ ರಸ್ತೆ" ಎಂದು ನಾಮಕರಣ ಮಾಡುವುದೆಂದು ಏಕಪಕ್ಷೀಯವಾಗಿ ತೀರ್ಮಾನಿಸಲಾಗಿದೆ. ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರು ಆಕ್ಷೇಪಣೆಗಳು/ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:16-09-2017ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯು ಹೊರಡಿಸಲಾದ 30 ದಿನಗಳ ಕಾಲವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಿರುವುದಿಲ್ಲ. ಮೇಲಿನ ಹಿನ್ನಲೆಯಲ್ಲಿ ಯಲಹಂಕ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ 13 ನೇ ಮುಖ್ಯ ರಸ್ತೆಯಿಂದ ಮೇಜರ್ ಉನ್ನಿಕೃಷ್ಣನ್ ರಸ್ತೆವರೆಗಿನ 16 ನೇ ಅಡ್ಡರಸ್ತೆಗೆ "ಅಕ್ಷಯ್ ಗಿರೀಶ್ ಕುಮಾರ್ ರಸ್ತೆ" ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳುವಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:12-01-2018ರ ಟಿಪ್ಪಣಿ.

ಶ್ರೀ.ಎಮ್.ಶಿವರಾಜು, ಆಡಳಿತ ಪಕ್ಷದ ನಾಯಕರು, ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯಲಹಂಕ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ 13ನೇ ಮುಖ್ಯ ರಸ್ತೆಯಿಂದ ಮೇಜರ್ ಉನ್ನಿಕೃಷ್ಣನ್ ರಸ್ತೆವರೆಗಿನ 16ನೇ ಅಡ್ಡರಸ್ತೆಗೆ **"ಅಕ್ಷಯ್ ಗಿರೀಶ್ ಕುಮಾರ್ ರಸ್ತೆ"** ಎಂದು ನಾಮಕರಣ ಮಾಡಲು ಮಂಡಿಸಿರುವ ಆಯುಕ್ತರವರ ದಿನಾಂಕ:12-01-2018ರ ಟಿಪ್ಪಣಿಯನ್ನು ಒಪ್ಪುವುದು."

ಶ್ರೀ.ಆರ್.ಎಸ್.ಸತ್ಯನಾರಾಯಣ ರವರು ಶ್ರೀ.ಎಮ್.ಶಿವರಾಜು, ಆಡಳಿತ ಪಕ್ಷದ ನಾಯಕರು, ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯಲಹಂಕ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ 13ನೇ ಮುಖ್ಯ ರಸ್ತೆಯಿಂದ ಮೇಜರ್ ಉನ್ನಿಕೃಷ್ಣನ್ ರಸ್ತೆವರೆಗಿನ 16ನೇ ಅಡ್ಡರಸ್ತೆಗೆ **"ಅಕ್ಷಯ್ ಗಿರೀಶ್ ಕುಮಾರ್ ರಸ್ತೆ"** ಎಂದು ನಾಮಕರಣ ಮಾಡಲು ಮಂಡಿಸಿರುವ ಆಯುಕ್ತರವರ ದಿನಾಂಕ:12-01-2018ರ ಟಿಪ್ಪಣಿಯನ್ನು ಒಪ್ಪುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು."

(ಆರ್.ಸಂಪತ್ ರಾಜ್)
ಮಹಾಪೌರರು